ಜಿಲ್ಲಾಪರಿಷತ್ ಮಾಡಿದ ಶಿಫಾರಸ್ಸುಗಳನ್ನು ಜಾರಿಗೊಳಿಸುವುದು.

೧೬೨೬. ಶ್ರೀ ಐ. ಬಿ. ಶಂಕರ್ (ಚಿಕ್ಕಮಂಗಳೂರು).— ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ವಕ್ಫ್ ಹಾಗೂ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾಪರಿಷತ್ ಮಾಡಿದ ಅಭಿವೃದ್ಧಿ ಕಾರ್ಯಗಳ ಶಿಫಾರಸ್ಸನ್ನು ಅಧಿಕಾರಿಗಳು ನಿರ್ಲಕ್ಷಿಸಿ ತುಂಬಾ ತಡವಾಗಿ ಜಾರಿಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಈ ರೀತಿಯ ಬೇಜವಾಬ್ದಾರಿಯಿಂದ ನಡೆಯುವ ಅಧಿಕಾರಿಗಳ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ? (ಹೆಸರು ಹುದ್ದೆಗಳ ವಿವರ ನೀಡುವುದು).—

ಶ್ರೀ ಅಬುಲ್ಲಾನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪರಿಚಾಯತ್ ರಾಜ್ ಸಚಿವರು). —

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಐ. ಬಿ. ಶಂಕರ್ — ಜಿಲ್ಲಾಪರಿಷತ್ತಿನ ಸದಸ್ಯರಾಗಿ ನಾವಿದ್ದೇವೆ. ಜಿಲ್ಲಾ ಪರಿಷತ್ತಿನಲ್ಲಿ ತೀರ್ಮಾನವಾದುದನ್ನು ಜಾರಿಗೆ ತರುತ್ತೇವೆ, ಅಧಿಕಾರ ವಿಕೇಂದ್ರೀಕರಣ ಮಾಡಬೇಕೆಂದು ಸರ್ಕಾರ ನಿಲುವು ತೆಗೆದುಕೊಂಡಿತ್ತು. ನಮಗೆ ಗೊತ್ತಿರುವ ಹಾಗೆ ಜಿಲ್ಲಾಪರಿಷತ್ತಿನಲ್ಲಿ ತೀರ್ಮಾನವಾದುದನ್ನು ೩-೪ ತಿಂಗಳಾದರೂ ಜಾರಿಗೆ ಬರುವುದಿಲ್ಲ. ಡೆಪ್ಯೂಟಿ ಸೆಕ್ರೆಟರಿ, ಸೆಕ್ರೆಟರಿ ಹತ್ತಿರ ಹೋಗಿಬರುವ ಹೊತ್ತಿಗೆ ೩ ತಿಂಗಳಾಗುತ್ತದೆ. ಇದು ತಮ್ಮ ಗಮನಕ್ಕೆ ಬಾರದಿದ್ದರೆ ಏನೂ ಮಾಡುವುದಕ್ಕಾಗುವುದಿಲ್ಲ ಜಿಲ್ಲಾ ಪರಿಷತ್ತಿಗೆ ಬಂದು ವಿಚಾರಣೆ ಮಾಡುತ್ತೇನೆಂದು ಮಾನ್ಯ ಸಚಿವರು ಭರವಸೆ ಕೊಟ್ಟಿದ್ದಕ್ಕಾಗಿ. ಅವರು ಬಾರದಿರುವುದರಿಂದ ಗೊತ್ತಾಗಿಲ್ಲವೆಂದು ಕಾಣುತ್ತದೆ. ಅಧಿಕಾರ ವಿಕೇಂದ್ರೀಕರಣ ಮಾಡ ಬೇಕೆಂಬುದು ಸರ್ಕಾರದ ದಿಟ್ಟ ನಿಲುವಾದರೆ, ಅಧಿಕಾರಿಗಳಿಗೆ ಅದು ನುಂಗಲಾರದ ತುತ್ತಾಗಿದೆ. ಆದ್ದರಿಂದ ಇದರ ಬಗ್ಗೆ ಇನ್ನೂ ಮುಂದಾದರೂ ಸರ್ಕಾರದವರು ನಿಗಾ ಇಡಲಿ ಎಂದು ಭಿನ್ನವಿಸಿ ಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್,— ಜಿಲ್ಲಾ ಪರಿಷತ್ತಿನಲ್ಲಿ ಅಧಿಕಾರಿಗಳು ವಿಳಂಬ ನೀತಿಯನ್ನು ಅನುಸರಿಸಿ ಜಿಲ್ಲಾ ಪರಿಷತ್ತಿನ ಧ್ಯೇಯೋದ್ದೇಶಗಳಿಗೆ ವಿರುದ್ಧವಾಗಿ ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆಂದು ಪ್ರಶ್ನೆ ಕೇಳಿದ್ದಾರೆ. ಮಾನ್ಯ ಶಂಕರ್‌ರವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಆಡಳಿತ ತ್ಮಾಕವಾದ ಹೆಚ್ಚಿನ ಕದಿಮೆಗಳಿಗೆ ಮುಖ್ಯ ಕಾರ್ಯದರ್ಶಿಯವರಲ್ಲಿ ತಮ್ಮ ಅಹವಾಲನ್ನು ಸಲ್ಲಿಸಬೇಕು. ಅಲ್ಲಿ ಆಗದೆ ಹೋದರೆ ಮುಂದಿನ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಐ. ಬಿ. ಶಂಕರ್.—ಸಚಿವರು ಉತ್ತಮವಾಗಿ ಉತ್ತರಿಸಿದ್ದಾರೆ. ನಾನಂ ಹೇಳುತ್ತಿರುವುದು ಮುಖ್ಯ ಕಾರ್ಯದರ್ಶಿಯವರು ಇದ್ದಾಗಲೇ ಪ್ರತಿಯೊಂದು ಬಿಲ್ಲುಗಳಿಗೂ ಗಲಾಟೆ ಮಾಡಿ ಮೀಟಿಂಗ್‌ನಲ್ಲಿ ತರುತ್ತಿದ್ದೇವೆ. ಮುಖ್ಯ ಕಾರ್ಯದರ್ಶಿಯವರಿಗೆ ಹೇಳುವುದಾದರೆ ಅಧಿಕಾರ ವಿಕೇಂದ್ರೀಕರಣ ಏನಾಯಿತು ? ಅಧಿಕಾರಿಗಳ ಹತ್ತಿರ ಹೋಗುವುದಾದರೆ ಅಧಿಕಾರ ವಿಕೇಂದ್ರೀಕರಣ ಎಂಬುದನ್ನು ಬದಲಾಯಿಸಬೇಕಾಗುತ್ತದೆ. ನಾವು ಹೇಳಿದ್ದು ನಡೆದಿಲ್ಲ. ಡೆಪ್ಯೂಟಿ ಸೆಕ್ರೆಟರಿ ಹತ್ತಿರ ೧೫-೨೦ ದಿವಸ. ಸೆಕ್ರೆಟರಿ ಹತ್ತಿರ ಒಂದು ತಿಂಗಳು ಫೈಲು ನಿಲ್ಲುತ್ತವೆ. ಆರ್ಡರ್ ಮಾಡಿದರೆ ಇನ್ನೊಂದು ಕ್ಲೈರಿ ಪಾಕ ಇಡುತ್ತಾರೆ. ಈ ಬಗ್ಗೆ ಮೀಟಿಂಗ್‌ನಲ್ಲಿ ದೊಡ್ಡ ಗಲಾಟೆಯಾಗಿದೆ. ಒಂದು ಕೆಲಸಕ್ಕೆ ೨-೩ ತಿಂಗಳು ಒದ್ದಾಡತಕ್ಕ ಪರಿಸ್ಥಿತಿ ಇದೆ. ಆದ್ದರಿಂದ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಸರ್ಕಾರದ ಗಮನಕ್ಕೆ ತಂದಾಗ ಅಲ್ಲೇ ಹೋಗಿ ಸೆಕ್ರೆಟರಿ ಹತ್ತಿರ ಹೇಳಿ ಅಂದರೆ ಏನು ಅರ್ಥ ? ಅಲ್ಲೇ ತೀರ್ಮಾನ ವಾಗಿದ್ದರೆ ಸರ್ಕಾರದ ಗಮನಕ್ಕೆ ತರುವ ಅವಶ್ಯಕತೆ ಏನಿತ್ತು ?

ಶ್ರೀ ಎ. ಲಕ್ಷ್ಮೀಸಾಗರ್.—ಜಿಲ್ಲಾ ಪರಿಷತ್ತು ಆಕ್ಟ್ ಪ್ರಕಾರ ಸರ್ಕಾರಕ್ಕೆ ಅಧಿಕಾರ ಇದರೆ ಅಧಿಕಾರವನ್ನು ಉಪಯೋಗಿಸಿ ಅವರು ಹೇಳತಕ್ಕ ನ್ಯೂನತೆಗಳನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.